ಒ ಎಸ್ 209/2022 ಪಿ.ಡಬ್ಲ್ಯೂ: 1

ಇಂದು ದಿ: 30.10.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಸಿ ಎನ್ ಪಿ ವಕೀಲರಿಂದ:

ದಾವಾ ಹಾಕುವಾಗ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ವಕೀಲರಿಗೆ ಮಾಹಿತಿ ನೀಡುವಾಗ ದಾಖಲಾತಿಗಳು ಇಲ್ಲದೆ ಕೊಟ್ಟಿರುತ್ತೇನೆ. ನಾನು ಹಾಜರು ಮಾಡಿರುವ ದಾಖಲೆಗಳನ್ನು ದಾವಾ ಸಲ್ಲಿಸಿದ ನಂತರ ಪಡೆದುಕೊಂಡ ಈ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಆ ಕಾರಣ ದಾವಾ ಬಗ್ಗೆ ನನಗೆ ಗೊತ್ತು. 1 ರಿಂದ 5ನೇ ಪ್ರತಿವಾದಿಗಳು ತಕಾರಾರು ಸಲ್ಲಿಸದಿರುವ ವಿಚಾರ ನನಗೆ ಗೊತ್ತು. 6ನೇ ಪ್ರತಿವಾದಿ ಮಾತ್ರ ತಕರಾರು ಸಲಸ್ಲಿಸಿರುವುದು ನನಗೆ ಗೊತ್ತು. ಅದರಲ್ಲಿ ಏನಿದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ದಾವಾದಲ್ಲಿ ಕೊಟ್ಟಿರುವ ವಂಶವೃಕ್ಷ ವಿವರಗಳನ್ನು ಹಳೆಯ ವಂಶವೃಕ್ಷದ ಆಧಾರದ ಮೇಲೆ ನೀಡಿರುತ್ತೇನೆ. ಆ ವಂತವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ದಾವೆಯ ವಂಶವೃಕ್ಷದ ಮಾಹಿತಿಯನ್ನು 1ನೇ ಪ್ರತಿವಾದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನಮ್ಮನ್ನು ಪ್ರೇರೇಪಿಸಿ ಈ ದಾವೆಯನ್ನು ಸಲ್ಲಿಸಿಲಾಗಿದೆ ಎಂದರೆ ಸರಿಯಲ್ಲ. ನಾವು ಹಾಜರು ಮಾಡಿರುವ ಎಲ್ಲಾ ದಾಖಲೆಗಳನ್ನು 1ನೇ ಪ್ರತಿವಾದಿಯ ಒದಗಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾವು ವರುಣಾದ ವಾಜಮಂಗಲದಲ್ಲಿ ವಾಸವಿದ್ದೇವೆ ಎಂದರೆ ಸರಿ. 1 ರಿಂದ 5ನೇ ಪ್ರತಿವಾದಿಗಳು ನಂಜನಗೂಡು ಗ್ರಾಮದ ಮಾದನಹಳ್ಳಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ನಮ್ಮ ಊರಿನಿಂದ ಮಾದನಹಳ್ಳಿಗೆ ಸುಮಾರು 60 ರಿಂದ 65 ಕಿ ಮೀ ಇರಬಹುದು. ಅಬ್ದುಲ್ ಖಾದಿರ್ ಮೃತಪಟ್ಟು 40 ವರ್ಷವಾಗಿದೆ ಎಂದರೆ 35 ವರ್ಷವಾಗಿದೆ. ಆ ಬಗ್ಗೆ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಮರಣ ಪ್ರಮಾಣ ಪತ್ರ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ..

ನಾವೆಲ್ಲರೂ ಅಬ್ದುಲ್ ಖಾದರ್ ರವರ ಮೊಮ್ಮಕ್ಕಳು ಎಂದು ತೋರಿಸಲು ದಾಖಲೆ ಹಾಜರು ಮಾಡಿರುತ್ತೇನೆ. ನಾವು ಅಬ್ದುಲ್ ಖಾದರ್ ಮೊಮ್ಮಕ್ಕಳು ಎಂದು ತೋರಿಸಲು ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ನಾವು ಅಬ್ದುಲ್ ಖಾದರ್ ರವರ ವಂಶಸ್ಥರಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಅಬ್ದುಲ್ ಖಾದರ್ ರವರ ಪಿತ್ರಾರ್ಜಿತ ಆಸ್ತಿ ಎಂದು ತಿಳಿಸಲು ಮೂಲ ದಾಖಲೆಯನ್ನು ಕೊಟ್ಟಿರುವುದಿಲ್ಲ. ಅಬ್ದುಲ್ ಖಾದರ್ ರವರ ತಂದೆಯ ಹೆಸರು ನಬೀಸ. ಅಬ್ದುಲ್ ಖಾದರ್ ರವರ ತಂದೆಗೆ ಅಬ್ದುಲ್ ಖಾದರ್ ಒಬ್ಬ ಮಗ ಮತ್ತು ಒಬ್ಬ ಮಗಳು ಇದ್ದಳು ಎಂದು ಹೇಳುತ್ತಿದ್ದರು ನನಗೆ ಗೊತ್ತಿಲ್ಲ. ಇದ್ದಳು ಎಂದು ಹೇಳುತ್ತಿರುವ ಮಗಳನ್ನು ಪಕ್ಷಕಾರರಾಗಿ ಮಾಡಿಲ್ಲ. ಅಬ್ದುಲ್ ಖಾದರ್ ಮರಣ ಹೊಂದಿದ ನಂತರ ಅವರ ವಾರಸುದಾರರು ವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸವಿರುವ ವಿಚಾರ ನನಗೆ ಗೊತ್ತು. ನಾನು ಹಾಜರು ಮಾಡಿರುವ ದಾಖಲೆ ಪ್ರಕಾರ ನನಗೆ ದಾವಾ ಆಸ್ತಿಯಲ್ಲಿ ಹಕ್ಕಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.